ದಿನಾಂಕ 07-11-2025 ರಂದು ಸಾಕ್ಷಿಯವರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಮೇಡಮ್ ಎ. ಎಸ್ ವಕೀಲರಿಂದಃ**

ನಾನು ಈ ಅರ್ಜಿಯಲ್ಲಿ 2 ನೇ ಅರ್ಜಿದಾರಳಾಗಿರುತ್ತೇನೆ. ಉಳಿದ ಅರ್ಜಿದಾರರ ಪರವಾಗಿ ನಾನೇ ಸಾಕ್ಷ್ಯವನ್ನು ನೀಡುತ್ತಿದ್ದೇನೆ. ನಾನು ಸಹಿ ಮಾಡಿರುವ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದನ್ನು ನಾನು ನೀಡಿರುವ ಮಾಹಿತಿ ಮೇರೆಗೆ ತಯಾರಿಸಿದ್ದು, ಅದರಲ್ಲಿರುವ ವಿಷಯಗಳು ಸರಿ ಇವೆ ಮತ್ತು ಸತ್ಯವಾಗಿರುತ್ತದೆ ಎಂದು ಪ್ರಮಾಣಿಕರಿಸುತ್ತೇನೆ.

ನಾನು ನನ್ನ ಅರ್ಜಿಯ ಜೊತೆ ಕೆಲವು ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನೋಡಿ ಗುರುತಿಸುತ್ತೇನೆ. ಸದರಿ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನೆಗೊಳಪಡಿಸಲಾಯಿತು.

| | |
|---|---|
| ನಿಪಿ-1 | ಪ್ರಥಮ ಮಾಹಿತಿಯ ಯಥಾಪ್ರತಿ |
| ನಿಪಿ-2 | ಪ್ರಥಮ ವರ್ತಮಾನ ವರದಿಯ ಯಥಾಪ್ರತಿ |
| ನಿಪಿ-3 | ಸ್ಥಳ ಪಂಚನಾಮೆಯ ಯಥಾಪ್ರತಿ |
| ನಿಪಿ-4 | ಕಚ್ಚಾ ನಕ್ಷೆಯ ಯಥಾಪ್ರತಿ |
| ನಿಪಿ-5 | ಶವ ಪರೀಕ್ಷಾ ವರದಿಯ ಯಥಾಪ್ರತಿ |
| ನಿಪಿ-6 | ಅಂತಿಮ ವರದಿಯ ಯಥಾಪ್ರತಿ |
| ನಿಪಿ-7 | ನಮೂನೆ 1 ರ ಯಥಾಪ್ರತಿ |

**ಈ ಹಂತದಲ್ಲಿ ಮುಂದುವರಿದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು, ನೀಡಲಾಗಿದೆ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದರು

ಹೆ..ಹಿ.ಸಿ.ನ್ಯಾ ಉಡುಪಿ.